ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಧಾನ ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಗಳು,
ಕುಮಟಾ.

ಸಿಸಿ ನಂ. 132/2023

| | | |
|---|---|---|
| ಹೆಸರು | – | ಶಾಂತಾಬಾಯಿ |
| ತಂದೆಯ ಹೆಸರು | – | ಶ್ರೀಧರ ಭಟ್ಟ |
| ವಯಸ್ಸು | – | 52 ವರ್ಷ |
| ಉದ್ಯೋಗ | – | ಕ್ಲರ್ಕ್ ಡಯಟ್ ಟ್ರೇನಿಂಗ್ ಕಾಲೇಜು |
| ವಾಸ್ತವ್ಯ | – | ಕೂಜಳ್ಳಿ, ಕುಮಟಾ. |

– ದಂಡ ಪ್ರಕ್ರಿಯಾ ಸಂಹಿತೆ ಕಲಂ.313 ರಡಿ ಆರೋಪಿಯ ಹೇಳಿಕೆ –

ಪ್ರಶ್ನೆ – 1 ಈ ಪ್ರಕರಣದಲ್ಲಿನ ಸಾಕ್ಷಿದಾರರ ಹೇಳಿಕೆಯನ್ನು ಓದಿ, ಹೇಳಿ, ಕೇಳಿ, ತಿಳಿದುಕೊಂಡಿದ್ದೀರಾ?

ಉತ್ತರ –

**ಪ್ರಶ್ನೆ – 2** ಪಿ ಡಬ್ಲ್ಯೂ 1 – ಶ್ರೀ ಗಜಾನನ ಕೇಶವ ಹರಿಕಂತ್ರರವರು ತಮ್ಮ ಸಾಕ್ಷ್ಯದಲ್ಲಿ, ನೀವು ಹಾಗೂ ಸುನೀಲ ಗಣಪತಿ ನಾಯ್ಕ, ಗಣಪತಿ ನಾರಾಯಣ ನಾಯ್ಕ ಸೇರಿಕೊಂಡು ಅವರ ಸಹಕಾರಿಗೆ ಭೇಟಿ ನೀಡಿ ಅವರ ಪೈಕಿ ಸುನೀಲ ಗಣಪತಿ ನಾಯ್ಕ ಇವರು ವ್ಯವಹಾರದ ಕುರಿತು ರೂ. 3,00,000/– ಗಳನ್ನು ಸಾಲವಾಗಿ ನೀಡುವಂತೆ ಸಲ್ಲಿಸಿದ ಸಾಲದ ಅರ್ಜಿಯನ್ನು ಅವರ ಸಹಕಾರಿಯವರು ಪರಿಶೀಲಿಸಿ ಸದ್ರಿಯವರಿಗೆ ಸಾಲದ ಖಾತೆ ನಂ. ಬಿ.ಲ್ .1076 ನೇದರಂತೆ ದಿಃ 11–02–2019 ರಂದು ಸಾಲವಾಗಿ ನೀಡಿದಂತೆ ಸದ್ರಿಯವರು ಪಡೆದಿದ್ದು ಸದರ ಸಾಲಕ್ಕೆ ನೀವು ಹಾಗೂ ಗಣಪತಿ ನಾರಾಯಣ ನಾಯ್ಕ ಇವರು ಜಾಮೀನುದಾರರಾಗದ್ದು ಇರುತ್ತದೆ ಎಂದು ಹೇಳುತ್ತಾರೆ . ಅದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರ –

**ಪ್ರಶ್ನೆ – 3** ಪಿ ಡಬ್ಲ್ಯೂ 1 – ಇವರು ಮುಂದುವರಿದು, ಸದರ ಸಾಲ ಪಡೆಯುವ ಕಾಲಕ್ಕೆ ಸಾಲಗಾರರು ವ ಜಾಮೀನುದಾರರು ಅವರ ಸಹಕಾರಿಗೆ ಸಾಲದ ಕರಾರು ಪತ್ರ , ವಚನ

ಪತ್ರ, ವಗೈರೇ ದಾಖಲೆಗಳನ್ನು ಬರೆಸಿಕೊಟ್ಟು ಸಾಲ ಪಡೆದಿದ್ದು ಇರುತ್ತದೆ ಎಂದು ಹೇಳುತ್ತಾರೆ . ಅದಕ್ಕೆ ನೀವು ಏನು ಹೇಳುತ್ತೀರಿ?

<u>ಉತ್ತರ –</u>

**<u>ಪ್ರಶ್ನೆ – 4</u>** ಪಿ ಡಬ್ಲ್ಯೂ 1 – ಇವರು ಮುಂದುವರಿದು , ಸದರ ಸಾಲದ ರಖಂನ್ನು ನೀವು ಸಾಲಗಾರರು ಹಾಗೂ ಜಾಮೀನುದಾರರು ಮಾತಿನಂತೆ ವ ದಾಖಲೆಗಳಂತೆ ಸಕಾಲದಲ್ಲಿ ವಸೂಲ ಕೊಡದೇ ಇದ್ದರಿಂದ ಸದರ ಸಾಲವು ಕಟಬಾಕಿಯಾದ್ದರಿಂದ ಅವರು ಸಾಲಗಾರರನ್ನು ಹಾಗೂ ಜಾಮೀನುದಾರರನ್ನು ಭೇಟಿಯಾಗಿ ಸದರ ಸಾಲದ ಕುರಿತು ಅವರ ಸಹಕಾರಿಗೆ ವಸೂಲ ಬರತಕ್ಕ ಸಾಲದ ಬಾಕೀ ಇದ್ದಂತಹ ರಖಂನ್ನು ಬಡ್ಡಿ ಸಹಿತ ಪೂರ್ತಿಯಾಗಿ ವಸೂಲ ಕೊಡುವರೇ ವಿನಂತಿಸಿಕೊಂಡಿರುತ್ತಾರೆ ಎಂದು ಹೇಳುತ್ತಾರೆ . ಅದಕ್ಕೆ ನೀವು ಏನು ಹೇಳುತ್ತೀರಿ?

<u>ಉತ್ತರ –</u>

**<u>ಪ್ರಶ್ನೆ – 5</u>** ಪಿ ಡಬ್ಲ್ಯೂ 1 – ಇವರು ಮುಂದುವರಿದು, ಆಗ ನೀವು ಅವರ ಸಹಕಾರಿಗೆ ದಿಃ 18-10-2021 ರಂದು ಬಂದು ನೀವು ಸದ್ರಿ ಸಾಲದ ಕುರಿತು ಅವರ ಸಹಕಾರಿಗೆ ವಸೂಲ ಕೊಡತಕ್ಕ ರಖಂ ಪೈಕಿರೂ. 3,75,861/- ಗಳನ್ನು ವಸೂಲ ನೀಡುತ್ತೇನೆ ಆದರೆ ಸದರ ಸಾಲದ ರಖಂ ಪೈಕಿ ರಖಂ ವಸೂಲ ನೀಡುವರೇ ಈಗ ತನ್ನ ಹತ್ತಿರ ಕೈಯಲ್ಲಿ ನಗದಾಗಿ ಹಣವಿಲ್ಲ ಆದ್ದರಿಂದ ನಿಮಗೆ ಚೆಕ್ ನ್ನು ಕೊಡುತ್ತೇನೆ ನೀವು ಬ್ಯಾಂಕಿನಿಂದ ಹಣ ಪಡೆದುಕೊಳ್ಳಿರಿ ಅಂತಾ ಹೇಳಿ ನೀವು ನಿಮ್ಮ ಖಾತೆ ಇರುವ ಎಸ್ ಬಿ ಐ , ಕುಮಟಾ ಇದರ ಚೆಕ್ ನಂ. 968230 ರೂ. 3,75,861/- ದಿಃ 18-10-2021 ನೇದನ್ನು ನೀಡಿದರು ಎಂದು ಹೇಳುತ್ತಾರೆ . ಅದಕ್ಕೆ ನೀವು ಏನು ಹೇಳುತ್ತೀರಿ?

<u>ಉತ್ತರ –</u>

**<u>ಪ್ರಶ್ನೆ – 6</u>** ಪಿ ಡಬ್ಲ್ಯೂ 1 – ಇವರು ಮುಂದುವರಿದು, ಸದರ ಚೆಕ್ ನ್ನು ಅವರ ಸಹಕಾರಿಯವರು ನಿಮ್ಮ ಮಾತಿನ ಮೇರೆಗೆ ಕಲೆಕ್ಷನ್ ಕುರಿತು ಅವರ ಬ್ಯಾಂಕರರಿಗೆ ಹಾಜರು ಪಡಿಸಿದಾಗ ಸದ್ರಿ ಚೆಕ್ ನಿಮ್ಮ ಖಾತೆಯಲ್ಲಿ ಸಾಕಷ್ಟು ಹಣ ಜಮಾ ಇಲ್ಲ ಎಂಬ ಕಾರಣದಿಂದ ನಗದೀಕರಣವಾಗದೇ ಮರಳಿ ಬಂದಿದ್ದು ಸದರ ವಿಷಯವನ್ನು ಬ್ಯಾಂಕರರು ದಿಃ 25-

10-2021 ರಂದು ತಿಳಿಸಿರುತ್ತಾರೆ ಎಂದು ಹೇಳುತ್ತಾರೆ . ಅದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರ -

**ಪ್ರಶ್ನೆ - 7** ಪಿ ಡಬ್ಲ್ಯೂ 1 - ಇವರು ಮುಂದುವರಿದು, ಕಾರಣ ಖಾತೆಯಲ್ಲಿ ಸಾಕಷ್ಟು ಹಣ ಜಮಾ ಇಲ್ಲದೇ ಚೆಕ್ ನೀಡುವುದು ಎನ್ ಆಯ್ ಎಕ್ಟರನ್ವಯ ದಂಡನೀಯ ಅಪರಾಧವಾಗಿರುತ್ತದೆ ಎಂದು ಹೇಳುತ್ತಾರೆ . ಅದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರ -

**ಪ್ರಶ್ನೆ - 8** ಪಿ ಡಬ್ಲ್ಯೂ 1 - ಇವರು ಮುಂದುವರಿದು , ಸದರ ಸಾಲದ ರಖಂನ್ನು ವಸೂಲ ಕೊಡಲು ನೀವು ಸಹ ಜವಾಬುದಾರರಿರುತ್ತೀರಿ ಎಂದು ಹೇಳುತ್ತಾರೆ . ಅದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರ -

**ಪ್ರಶ್ನೆ - 9** ಪಿ ಡಬ್ಲ್ಯೂ 1 - ಇವರು ಮುಂದುವರಿದು, ನೀವು ನಿಮ್ಮ ಖಾತೆಯಲ್ಲಿ ಸಾಕಷ್ಟು ಹಣ ಜಮಾ ಇಲ್ಲ ಎನ್ನುವುದು ತಿಳಿದು ತಿಳಿದೂ ಬುಧ್ಯಾ ಪೂರ್ವಕವಾಗಿ ನೀವು ಅವರ ಸಹಕಾರಿಗೆ ವಸೂಲ ಕೊಡತಕ್ಕ ಪೈಕಿ ರಖಂನ್ನು ಕೊಡದೇ ತಪ್ಪಿಸಿಕೊಳ್ಳಬೇಕೆಂಬ ದುರುದ್ದೇಶದಿಂದ ಅವರ ಸಹಕಾರಿಗೆ ಬೋಗಸ್ ಚೆಕ್ ನೀಡಿ ಎನ್ ಆಯ್ ಆಕ್ಟ ಪ್ರಕಾರ ಧಂಡನೀಯ ಅಪರಾಧ ಎಸಗಿದ್ದು ಇರುತ್ತದೆ ಎಂದು ಹೇಳುತ್ತಾರೆ . ಅದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರ -

**ಪ್ರಶ್ನೆ - 10** ಪಿ ಡಬ್ಲ್ಯೂ 1 - ಇವರು ಮುಂದುವರಿದು, ಹೀಗಿರುವಲ್ಲಿ ಅವರ ಸಹಕಾರಿಯವರು ಸದರಿ ಚೆಕ್ ಅಮಾನ್ಯಗೊಂಡ ಕುರಿತು ನಿಮಗೆ ಅವರ ವಕೀಲರ ಮೂಲಕ ದಿಃ 15-11-2021 ನೇ ನೋಟಿಸು ಕೊಡಿಸಿ ಸದರ ನೋಟಿಸು ಜಾರಿಯಾದ 15 ದಿವಸದೊಳಗಾಗಿ ಸದರ ಚೆಕ್ ರಖಂನ್ನು ವಸೂಲ ನೀಡುವಂತೆ ಮಾಗಣಿ ಮಾಡಿ ಕಳಿಸಿದ ನೋಟಿಸು ನಿಮಗೆ

ದಿಃ 16-11-2021 ರಂದು ಜಾರಿಯಾದದ್ದು ಇರುತ್ತದೆ ಎಂದು ಹೇಳುತ್ತಾರೆ . ಅದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರ -

**ಪ್ರಶ್ನೆ - 11** ಪಿ ಡಬ್ಲ್ಯೂ 1 - ಇವರು ಮುಂದುವರಿದು , ಸದರ ನೋಟಿಸಿಗೆ ನೀವು ಉಲ್ಲಟ ಸ್ವರೂಪದ ಉತ್ತರ ನೀಡಿದ್ದು ಇರುತ್ತದೆಯೇ ವಿನಃ ಚೆಕ್ ರಖಂ ವಸೂಲ ನೀಡಿದ್ದಾಗಲೀ ಇರುವುದಿಲ್ಲಾ ಎಂದು ಹೇಳುತ್ತಾರೆ . ಅದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರ -

**ಪ್ರಶ್ನೆ - 12** ಈ ಪ್ರಕರಣದ ಬಗ್ಗೆ ನೀವು ಏನಾದರೂ ಹೇಳಲು ಇಚ್ಛಿಸುತ್ತೀರಾ?

ಉತ್ತರ -

**ಪ್ರಶ್ನೆ - 13** ನಿಮ್ಮ ಪರ ರಕ್ಷಣಾ ಸಾಕ್ಷಿಯನ್ನು ವಿಚಾರಣೆ ಮಾಡುತ್ತೀರಾ?

ಉತ್ತರ -

ಆರೋಪಿಯ ಹೇಳಿಕೆಯನ್ನು ನನ್ನ ಸಮಕ್ಷಮ ಬಹಿರಂಗ ನ್ಯಾಯಾಲಯದಲ್ಲಿ ಪಡೆದುಕೊಳ್ಳಲಾಯಿತು. ಇದರಲ್ಲಿನ ಎಲ್ಲ ಅಂಶಗಳನ್ನು ಈ ಕಡತವು ಪೂರ್ಣವಾಗಿ ಒಳಗೊಂಡಿರುತ್ತದೆ.

ಸ್ಥಳಃ ಕುಮಟಾ<br>ದಿಃ 29-08-2025.

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು<br>ಪ್ರಧಾನ ಪ್ರ.ದ.ನ್ಯಾ.ದಂ., ಕುಮಟಾ .